## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:30-11-2020 ರ ನಡವಳಿಗಳು

**ವಿಷಯದ ಸಂಖ್ಯೆ: 543/2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿಯ ರಸ್ತೆ ಗುಂಡಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ವಿಚಾರವಾಗಿ ಘನ ನ್ಯಾಯಾಲಯದಲ್ಲಿ ದಾಖಲಾಗಿ ವಿಚಾರಣಾ ಹಂತದಲ್ಲಿರುವ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ:42927/2015 ರಲ್ಲಿ ಮಾನ್ಯ ನ್ಯಾಯಾಲಯವು ನಿರ್ದೇಶನ ನೀಡಿದ ಅನುಸಾರ ಪಾಲಿಕೆ ವ್ಯಾಪ್ತಿಯಲ್ಲಿಯ ರಸ್ತೆ ಗುಂಡಿಗಳ ಪರಿಣಾಮ ಸಂಭವಿಸುವ ಅನಾಹುತಗಳಲ್ಲಿ ಗಾಯಗೊಂಡಿರುವ ಅಥವಾ ಮರಣ ಹೊಂದಿರುವ ಪ್ರಕರಣಗಳಲ್ಲಿ ಪಾಲಿಕೆಯು ಪರಿಹಾರವನ್ನು ನೀಡುವ ವಿಷಯದಲ್ಲಿ Bye-laws (ಉಪನಿಧಿ)ಯನ್ನು ರಚಿಸಲು ಕೆ.ಎಂ.ಸಿ.ಕಾಯ್ದೆ ಕಲಂ 423(7)(ಬಿ)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಡಿ ರಚಿಸಲಾಗಿದೆ.

ಪ್ರಸ್ತಾಪಿತ Bye-laws (ಉಪನಿಧಿ) ಗೆ The Bruhat Bangaluru Mahanagara Palike (Payment of Compensation to victims of potholes on public street), Bye-laws 2020 (ಉಪನಿಧಿ) ಎಂದು ಕರೆಯಲ್ಪಡುವ ಉಪವಿಧಿಯಲ್ಲಿ 14 ಉಪವಿಧಿಗಳು ಒಂದು ಅನುಬಂಧವನ್ನು (Schedule-1) ಒಳಗೊಂಡಿರುತ್ತದೆ.

ಸದರಿ ಉಪವಿಧಿಯ ಕರಡನ್ನು ಘನ ಸರ್ಕಾರದ ಅಂಗೀಕಾರ ಮತ್ತು ಅಧಿಕೃತ ಜಾರಿಯ ಕುರಿತು ಘನಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25-11-2020 ರ ಟಿಪ್ಪಣಿ.

**ತೀರ್ಮಾನ :** **ಪ್ರಸ್ತಾವನೆ ಸಂಬಂಧ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.**

**ಚರ್ಚೆಯ ಸಮಯದಲ್ಲಿ ಅಭಿಪ್ರಾಯ ವ್ಯಕ್ತವಾದಂತೆ, ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ:42927/2015 ರಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ನಿರ್ದೇಶಾನುಸಾರ ಪಾಲಿಕೆ ವ್ಯಾಪ್ತಿಯಲ್ಲಿಯ ರಸ್ತೆ ಗುಂಡಿಗಳಿಂದ ಸಂಭವಿಸುವ ಅನಾಹುತಗಳಲ್ಲಿ ಗಾಯಗೊಳ್ಳುವ ಅಥವಾ ಮರಣ ಹೊಂದುವ ಪ್ರಕರಣಗಳಲ್ಲಿ ಪಾಲಿಕೆಯು ಪರಿಹಾರವನ್ನು ನೀಡುವ ವಿಷಯದಲ್ಲಿ Bye-laws (ಉಪನಿಧಿ) ಅನ್ನು ರಚಿಸುವ ಬದಲಾಗಿ, ಮಾರ್ಗಸೂಚಿಯನ್ನು ಹೊರಡಿಸುವ ಬಗ್ಗೆ ಆಯುಕ್ತರು ಅಗತ್ಯ ಕ್ರಮವಹಿಸುವುದು.**

(ಗೌರವ ಗುಪ್ತ)
ಆಡಳಿತಗಾರರು